ಆ) ಶಿವಮೊಗ್ಗ ಜಿಲ್ಲೆಯಲ್ಲಿ ದಿನಾಂಕ 16.11.92 ರಿಂದ 18.12.92 ರವರೆಗೆ ಬಿದ್ದ ಭಾರಿ ಮಳೆಯಿಂದ ಈ ಕೆಳಕಂಡ ಪ್ರದೇಶಗಳಲ್ಲಿ ಭತ್ತ, ಕಬ್ಬು, ಅಡಿಕೆ ತೋಟ ನಾಶವಾಗಿರುತ್ತದೆ.

ಭತ್ತ	31640 ಎಕರೆ
ಕಬ್ಬು	114 ಎಕರೆ
ಅಡಿಕೆ ತೋಟ	92 ಎಕರೆ

ಆ) ಹೊಳೆಹೊನ್ನೂರು ಕ್ಷೇತ್ರದಲ್ಲಿ ಹಾನಿಗೊಳಗಾದ ವಿಸ್ತೀರ್ಣ ಈ ಕೆಳಕಂಡಂತೆ ಇರುತ್ತದೆ:

1. ಭತ್ತ 956 ಎಕರೆ, 12 ಗುಂಟೆ
2. ಕಬ್ಬು 109 ಎಕರೆ, 18 ಗುಂಟೆ
3. ಅಡಿಕೆ ತೋಟ 75 ಎಕರೆ

ಇ) ಹಾನಿಗೊಂಡ ಪ್ರತಿ ಹೆಕ್ಟೇರ್ ಬೆಳೆಗೆ ರೂ. 500 ನಂತೆ, ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಸಹಕಾರ ಸಂಘಗಳಿಗೆ ನಿರ್ದೇಶಕರಾಗಿ ನಿಲ್ಲಲು ಮೀಸಲಾತಿ ನೀಡುವ ವಿಚಾರ

225 (787) ಶ್ರೀ ಕರಿಯಣ್ಣ (ಹೊಳೆಹೊನ್ನೂರು):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಹಕಾರ ಸಂಘಗಳ ನಿರ್ದೇಶಕರುಗಳ ಸ್ಥಾನಕ್ಕೆ ಸ್ಪರ್ಧಿಸಲು ಮೀಸಲಾತಿಯನ್ನು ಸರ್ಕಾರ ಪಾಲಿಸುತ್ತಿದೆಯೇ ?

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಸಂಘಗಳಲ್ಲಿ ಮೀಸಲಾತಿಯನ್ನು ಯಾವ ಪ್ರಮಾಣದಲ್ಲಿ ಹಾಗೂ ಯಾವ ವರ್ಗಕ್ಕೆ ಅನುಸರಿಸಲಾಗುತ್ತಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) ಕೇವಲ ವ್ಯಕ್ತಿಗಳು ಮಾತ್ರ ಸದಸ್ಯರಾಗಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಯ ರಚನೆಯಲ್ಲಿ ಮೀಸಲಾತಿ ನಿಯಮವನ್ನು ಪಾಲಿಸಲಾಗಿರುತ್ತದೆ.

ಆ) ಕೇವಲ ವ್ಯಕ್ತಿಗಳು ಮಾತ್ರ ಸದಸ್ಯರಾಗಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೂ ಹಾಗೂ ಒಂದು ಸ್ಥಾನವನ್ನು ಮಹಿಳೆಯರಿಗೂ ಮೀಸಲಾಗಿಟ್ಟಿದೆ.

ದ. ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರ ಕೊರತೆ

227 (906) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಮಣ್ಣು ಪರೀಕ್ಷೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ?

ಆ) ಜಿಲ್ಲೆಯಲ್ಲಿ ಎಷ್ಟು ಜನ ಕೃಷಿ ಸಹಾಯಕರ ಕೊರತೆ ಇರುವುದು ?

ಇ) ಈ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?